ತೆಗೆದುಕೊಳ್ಳುತ್ತಿದ್ದಾರೆಂದು ಗೊತ್ತಾದರೆ ಮುಗಿಯಿತು. 'ನಿಮಗೆಲ್ಲಾ ದುಡ್ಡು ಜಾಸ್ತಿಯಾಗಿದೆ, ಸುಮ್ನೆ ಸಾವ್ರಗಟ್ಲೆ ಸುರೀತೀರಾ, ನಂಗೆ ಇನ್ನೂರು ರೂಪಾಯಿ ಕೊಟ್ರೆ ಹಳೇದನ್ನೇ ರಿಪೇರಿ ಮಾಡ್ ಕೊಡ್ತಿದ್ದೆ, ಹೊಸಾದೇ ಬೇಕು ಅನ್ನೋ ಚಟ ನಿಮ್ಗೆಲ್ಲಾ' ಎಂದು ಎಲ್ಲರೆದುರೂ ಬೈಯುತ್ತಿದ್ದ. ಗಿರಾಕಿಗಳಿಗೆ ಹೆದರಿಸಿ ವಾಪಸ್ ಕಳಿಸುತ್ತೀಯಾ ಎಂದು ಶೋರೂಂ ಶಿವಣ್ಣಂಗೂ ರಿಪೇರಿ ಬಾಬುವಿಗೂ ಒಮ್ಮೆ ಗಲಾಟೆಯೂ ಆಗಿತ್ತು. ಇಂತಹಾ ರಿಪೇರಿ ಬಾಬುವನ್ನೇ ನಮ್ಮ ಮನೆಯ ಹಳೆಯ ಇಸ್ತ್ರಿ ಪೆಟ್ಟಿಗೆಯೊಂದು ಥರಥರ ನಡುಗಿಸಿಬಿಟ್ಟಿತು ಎಂದರೆ ನೀವು ನಂಬಲೇಬೇಕು.

ಅದೊಂದು 'ನಿಯೋ' ಎನ್ನುವ ಯಾವುದೋ ಹೆಸರಿಲ್ಲದ ಕಂಪನಿಯ ಸಿಕ್ಕಾಪಟ್ಟೆ ಹಳೆಯ ಮತ್ತು ಅಸಾಧಾರಣ ಇಸ್ತ್ರಿಪೆಟ್ಟಿಗೆ. ನಾನು ಹುಟ್ಟುವುದಕ್ಕಿಂತ ಮುಂಚೆ ನಮ್ಮ ಮನೆಗೆ ಬಂದಿದ್ದ ಆ ಇಸ್ತ್ರಿ ಪೆಟ್ಟಿಗೆ ನನ್ನ ಎಂಜಿನಿಯರಿಂಗ್ ಕಾಲೇಜಿನ ಬಟ್ಟೆಗಳನ್ನು ಇಸ್ತ್ರಿ ಮಾಡುವ ಹಂತಕ್ಕೆ ಬಂದರೂ ಒಮ್ಮೆಯೂ ಕೈ ಕೊಟ್ಟಿರಲಿಲ್ಲ. ಅಂಥಾ ಇಸ್ತ್ರಿ ಪೆಟ್ಟಿಗೆಯನ್ನೂ ಹಾಳು ಮಾಡಿದ ಕೀರ್ತಿ ನನ್ನ ಲ್ಯಾಬ್ ಏಪ್ರಾನಿಗೆ ಸಲ್ಲಬೇಕು. ಎರಡು ದಶಕಗಳಿಂದ ಬಟ್ಟೆಗಳನ್ನು ಐರನ್ ಮಾಡೀ ಮಾಡೀ ಬಿಸಾಕಿದ್ದ ಇಸ್ತ್ರಿ ಪೆಟ್ಟಿಗೆ ಹಾಳಾಯಿತು ಎಂದು ಗೊತ್ತಾದಾಗ ಅಮ್ಮನಿಗೆ ಹಳೇ ಗೆಳತಿ ಮಾತನಾಡುವುದು ನಿಲ್ಲಿಸಿದಷ್ಟೇ ಬೇಸರವಾಯಿತು. ಸರಿ, ರಿಪೇರಿ ಬಾಬುವಿನ ಪ್ರವೇಶವಾಯಿತು. ಎಡಗೈಯಲ್ಲಿ ರಿಪೇರಿ ಮಾಡಿ ಮುಗಿಸಿರುತ್ತೇನೆ, ಬೆಳಗ್ಗೆ ಬನ್ನಿ ಎಂದು ದರ್ಪದಿಂದ ನುಡಿದ ರಿಪೇರಿ ಬಾಬು ರಾತ್ರಿ ಇಸ್ತ್ರಿಪೆಟ್ಟಿಗೆಯನ್ನು ಓಪನ್ ಮಾಡುತ್ತಿದ್ದಂತೆ ದಿಗ್ಮೂಢ ನಾಗಿದ್ದ. ಅದರೊಳಗಿರುವ ಯಾವ ಬಿಡಿಭಾಗಗಳೂ ಅವನ ಜೀವನದಲ್ಲಿ ಎಂದೂ ನೋಡದವಾಗಿದ್ದವು. ರಾತ್ರಿಯೆಲ್ಲಾ ಸಿಕ್ಕಸಿಕ್ಕ ವೈರುಗಳನ್ನು ಕಿತ್ತು ಜೋಡಿಸಿ ದೇವರಿಗೆ ಕೈ ಮುಗಿದು ಅಲಕ್‌ಬುಲಕ್ ಆಗಿ ಸರಿ ಆಗಿಬಿಡಲಿ ಎಂದು ಬೇಡಿಕೊಂಡ. ದೇವರು ನಿದ್ರೆ ಮಾಡಿದ್ದರೆನ್ನಿಸುತ್ತದೆ, ಅವನ ಪ್ರಾರ್ಥನೆ ಕೇಳಿಸಿಕೊಳ್ಳಲಿಲ್ಲ. ಬೆಳಗ್ಗೆ ಅವನೆದುರು ಹೋಗಿ ನಿಂತ ಅಪ್ಪ ಅವನು ದೂರುವಂತೆ ಕುಹಕದ ನಗೆ ಬೀರಿದ್ದರೋ ಇಲ್ಲವೋ ಗೊತ್ತಿಲ್ಲ, ಒಟ್ಟಿನಲ್ಲಿ ಒಂದಿಬ್ಬರ ಬಳಿ 'ನಮ್ ಐರನ್ ಬಾಕ್ಸು ನೋಡಿ ರಿಪೇರಿ ಬಾಬು ತಲೆ ಗಿರಿ ಗಿರಿ ತಿರುಗ್ತು' ಅಂತ ಹೇಳಿಕೊಂಡಿದ್ದಂತೂ ಸತ್ಯ. ಆ ಇಸ್ತ್ರಿ ಪೆಟ್ಟಿಗೆ ಮುಂಬೈಗೆ ಹೋಗಿಬಂದರೂ ಸರಿಯಾಗದೇ ಕೊನೆಗೆ ಆ ಕಂಪನಿಯ ಇ ಮೇಲ್ ವಿಳಾಸ ಹುಡುಕಿ ಸಂದೇಶ ಕಳಿಸಿದ್ದಾಯಿತು. ಆ ಕಂಪನಿಯವರು ನಷ್ಟವಾಗಿ ಭಾರತದಲ್ಲಿದ್ದ ತಮ್ಮ ಎಲ್ಲಾ ಶಾಖೆಗಳನ್ನೂ ಮುಚ್ಚಿಕೊಂಡು ಇಂಗ್ಲೆಂಡಿಗೆ ಹೋಗಿಬಿಟ್ಟಿದ್ದರು. ಆಕ್ರಮಣಕಾರರು ದಂಡೆತ್ತಿ ಬಂದಾಗ ಊರು ಬಿಟ್ಟು ಓಡಿಹೋಗಿದ್ದ ರಾಜವಂಶದವರಿಗೆ ತಮ್ಮ ಮನೆತನದ ಕುಡಿಯೊಂದು ದೂರದಲ್ಲೆಲ್ಲೋ ಇನ್ನೂ ಬೆಳೆಯುತ್ತಿದೆ ಎಂದು ಗೊತ್ತಾದಾಗ ಕುಣಿದು ಕುಪ್ಪಳಿಸುವಂತೆ ಅವರು ಇಸ್ತ್ರಿಪೆಟ್ಟಿಗೆಯನ್ನು ಅವರದ್ದೇ ಖರ್ಚಿನಲ್ಲಿ ಇಂಗ್ಲೆಂಡಿಗೆ ತರಿಸಿಕೊಂಡು ರಿಪೇರಿ ಮಾಡಿ ವಾಪಸ್ ಕೊರಿಯರ್ ಮಾಡಿದ್ದಲ್ಲದೇ ತಮ್ಮ ಕಂಪನಿಯ ವಸ್ತುವಿನ ಕಾರ್ಯಕ್ಷಮತೆಯನ್ನು ಕಣ್ಬಿಟ್ಟು ನೋಡಿ ಎಂದು ಅಲ್ಲಿನ ಪತ್ರಿಕೆಗಳಲ್ಲೆಲ್ಲಾ ನ್ಯೂಸು ಮಾಡಿಸಿಕೊಂಡರಂತೆ. ಫಾರಿನ್ನಿಂದ ಮರಳಿದ ಇಸ್ತ್ರಿ ಪೆಟ್ಟಿಗೆಗೆ ರಾಜವೈಭೋಗದ ಸ್ವಾಗತ ಸಿಕ್ಕಿತು. ಜೀವಮಾನದಲ್ಲಿ ಒಂದು ನದಿಯನ್ನೂ ಸರಿಯಾಗಿ ದಾಟದ ನಮ್ಮ ಕುಟುಂಬದಲ್ಲಿ ಸಾಗರವನ್ನೇ ದಾಟಿಕೊಂಡು ಬಂದಿದ್ದ ಆ ಐರನ್ ಬಾಕ್ಸು ಅದ್ವಿತೀಯನೇ ಆಗಿತ್ತು. ಈ ಎಲ್ಲಾ ಘಟನೆಗಳನ್ನೂ ರಿಪೇರಿ ಬಾಬು ಮಾತ್ರ ಅವನದ್ದೇ ದೃಷ್ಟಿಕೋನದಲ್ಲಿ ನೋಡಿದ್ದ. 'ನನ್ನ ಹೆಸರು ಹಾಳು ಮಾಡಬೇಕು ಅಂತಾನೇ ಯೂಸೇ ಮಾಡ್ದೇ ಸೈಡಿಗಿಟ್ಟಿದ್ ಐವತ್ ವರ್ಷ ಹಳೇ ಐರನ್ ಬಾಕ್ಸು ರಿಪೇರಿಗ್ ಕೊಟ್ರು' ಎಂದು ಎಲ್ಲರ ಬಳಿ ಬೈದುಕೊಂಡು ಬಂದನಲ್ಲದೇ ಅದಾದಮೇಲೆ ನಾವು ಯಾವುದೇ ವಸ್ತುವನ್ನು ರಿಪೇರಿಗೆ ಕೊಂಡೊಯ್ದರೂ 'ಇದು ನನ್ ಲೆವೆಲ್ಲಿಗ್ ಆಗಲ್ಲ ಬಿಡಿ, ಫಾರಿನ್ನಿಗ್ ಕಳ್ಸಿ ನೋಡಿ ಯಾವ್ದಕ್ಕೂ' ಎಂದು ಹೇಳಿ ತಿರಸ್ಕರಿಸುತ್ತಿದ್ದ. ಅವನ ಮತ್ತು ನಮ್ಮ ಕುಟುಂಬದ ಮಧ್ಯೆ ಇದ್ದ ಸಂಬಂಧ ಮತ್ತೆಂದೂ ಇಸ್ತ್ರಿ ಮಾಡಿ ಸಪಾಟು ಮಾಡಲಾಗದಷ್ಟು ಹದಗೆಟ್ಟಿತ್ತು!.

ರಿಪೇರಿಯಿಂದ ಒಳ್ಳೆಯದಾಗುವುದು, ಕೆಟ್ಟದ್ದಾಗುವುದು ಸಂದರ್ಭಕ್ಕೆ ಬಿಟ್ಟಿದ್ದು. ಆದರೆ ರಿಪೇರಿಯೇ ನನ್ನ ಯೋಗ್ಯತೆಗೆ ಮಾನದಂಡವಾಗುವಂತಹ ಪರಿಸ್ಥಿತಿ ಬರುತ್ತದೆ ಎಂದು ನಾನು ಎಲೆಕ್ಟ್ರಾನಿಕ್ಸ್